ಓ ಎಸ್ ನಂ. 36/2023

ಪಿ ಡಬ್ಲ್ಯು 1

ದಿನಾಂಕ 11/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಬಿ ಹೆಚ್ ಆರ್ ವಕೀಲರಿಂದಃ

ನನ್ನ ವಾದಪತ್ರದಲ್ಲಿ ಹೇಳಿರುವಂತೆ ವಿಜಯಾ ಬ್ಯಾಂಕ್ ಮತ್ತು ದೇನಾ ಬ್ಯಾಂಕ್ ಗಳು ಬ್ಯಾಂಕ್ ಆಫ್ ಬರೋಡಕ್ಕೆ ವಿಲೀನವಾದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಪ್ರತಿವಾದಿ ವಿಜಯಾ ಬ್ಯಾಂಕಿನಿಂದ ಪಡೆದ ಸಾಲದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 7 ಲಕ್ಷ ರೂಗಳನ್ನು ಸಾಲವಾಗಿ ಪಡೆದಿರುತ್ತಾರೆ. ಪ್ರತಿವಾದಿಗಳು ತಾವು ಪಡೆದ ಸಾಲದ ಬಾಬ್ತು ಎಷ್ಟು ಹಣವನ್ನು ಮರುಪಾವತಿ ಮಾಡಿದ್ದಾರೆಂದು ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ಆ ಬಗ್ಗೆ ಸ್ಟೇಟ್ಮೆಂಟ್ ಆಫ್ ಅಕೌಂಟನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಸಾಲದ ಬಾಬ್ತು ಒಟ್ಟು ಎಷ್ಟು ಹಣವನ್ನು ಮರುಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಿಪಿ-6 ರ ದಾಖಲೆಯ ಪ್ರಕಾರ ಪ್ರತಿವಾದಿಗಳು 10,63,000 ರೂಗಳನ್ನು ಮರುಪಾವತಿ ಮಾಡಲು ಬಾಕಿ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಸಾಲ ಪಡೆದ ನಂತರ ಒಟ್ಟು 3.5 ಲಕ್ಷ ರೂಗಳನ್ನು ಮರುಪಾವತಿ

ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ರೀತಿ ಮರುಪಾವತಿ ಮಾಡಿದ್ದರೇ ಅದನ್ನು ಸಾಲದ ಮೊತ್ತದಲ್ಲಿ ಕಳೆದಿರುತ್ತಾರೆ ಎಂದು ನುಡಿಯುತ್ತಾರೆ. ಆರ್ ಬಿ ಐ ನಿಬಂಧನೆಗಳಿಗೆ ವಿರುದ್ದವಾಗಿ ಪ್ರತಿವಾದಿಗಳಿಗೆ ಹೆಚ್ಚುವರಿ ಬಡ್ಡಿಯನ್ನು ವಿಧಿಸಲಾಗಿದೆ ಎಂದರೆ ಸರಿಯಲ್ಲ. ದಿನಾಂಕ **15/04/2019** ರಂದು ಸಾಲದ ಬಾಬ್ತು **1,16,866/-** ರೂಗಳನ್ನು ನಮ್ಮ ಬ್ಯಾಂಕಿಗೆ ಜಮೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಹಣವನ್ನು ಪ್ರತಿವಾದಿಗಳ ಸಾಲದ ಕಡೆಗೆ ಕಡತಗೊಳಿಸಿರುವುದಿಲ್ಲ ಎಂದರೆ ಸಾಕ್ಷಿ ಸಾಲದ ಹಣ ಜಮೆಯಾದ ಬಗ್ಗೆ ಕಂಪ್ಯೂಟರೀಕೃತ ಅಕೌಂಟನ್ನು ಮಾಡಿದ್ದು ಪ್ರತಿವಾದಿಗಳು ಕಟ್ಟಿದ ಪ್ರತಿ ಹಣವನ್ನು ಸಹ ನಮೂದು ಮಾಡಲಾಗುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ನಗದು ರೂಪದಲ್ಲಿ ತಲಾ 50 ಸಾವಿರ ರೂಗಳಂತೆ ಒಟ್ಟು ಮೂರು ಬಾರಿ 1.50 ಲಕ್ಷ ರೂಾಗಳನ್ನು ಸಹ ಮರುಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಪ್ರತಿವಾದಿಗಳು ಸಾಲದ ಬಾಬ್ತು ಕಟ್ಟಿರುವ ಪ್ರತಿ ಹಣ ಸಾಲಕದ ಖಾತೆಗೆ ಜಮೆ ಆಗಿ ಕಟಾವು ಆಗಿರುತ್ತದೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.